# ಶ್ರೀ ರಾಮಕೃಷ್ಣ ಶಾರದಾಶ್ರಮ, ಪೊನ್ನಂಪೇಟೆ – 571216, ಕೊಡಗು ಜಿಲ್ಲೆ

**Phone:** 08274–249040, 249555; **e-mail:** srkseva@gmail.com; **wesbite:** rkmponnampet.org

## ಆಧ್ಯಾತ್ಮಿಕ ಶಿಬಿರ (2011ರ ಮೇ 6ರಿಂದ 8ರವರೆಗೆ)

ಆತ್ಮೀಯ ಭಕ್ತರೇ, ಭಗವಾನ್ ಶ್ರೀರಾಮಕೃಷ್ಣರ 175ನೆಯ ಜನ್ಮದಿನೋತ್ಸವದ ಅಂಗವಾಗಿ ಮೂರು ದಿನಗಳ ವಿಶೇಷ ಆಧ್ಯಾತ್ಮಿಕ ಶಿಬಿರವನ್ನು ಪೊನ್ನಂಪೇಟೆಯ ಶ್ರೀ ರಾಮಕೃಷ್ಣ ಶಾರದಾಶ್ರಮದಲ್ಲಿ ಏರ್ಪಡಿಸಲಾಗಿದೆ. ಇದರಲ್ಲಿ ಭಾಗವಹಿಸುವ ಮೂಲಕ ಭಕ್ತಾದಿಗಳು ತಮ್ಮ ಆಧ್ಯಾತ್ಮಿಕ ಸಾಧನೆಯ ಪ್ರಗತಿಯನ್ನು ಇನ್ನೂ ಉತ್ತಮಗೊಳಿಸಿಕೊಳ್ಳಲು ಅನುಕೂಲವಾಗುತ್ತದೆ. ಅನೇಕ ಹಿರಿಯ ಸ್ವಾಮೀಜಿಗಳು ಮತ್ತು ಪ್ರತಿಷ್ಠಿತ ವ್ಯಕ್ತಿಗಳು ಇದರಲ್ಲಿ ಪಾಲ್ಗೊಳ್ಳುತ್ತಾರೆ. ಎಲ್ಲ ಭಕ್ತರೂ ಈ ಆಧ್ಯಾತ್ಮಿಕ ಶಿಬಿರದಲ್ಲಿ ಪಾಲ್ಗೊಂಡು, ಭಗವಾನ್ ಶ್ರೀರಾಮಕೃಷ್ಣ, ಶ್ರೀಮಾತೆ ಶಾರದಾದೇವಿ ಮತ್ತು ಸ್ವಾಮಿ ವಿವೇಕಾನಂದರ ಅನುಗ್ರಹಕ್ಕೆ ಪಾತ್ರರಾಗಬೇಕೆಂದು ಈ ಮೂಲಕ ಆಹ್ವಾನಿಸುತ್ತಿದ್ದೇವೆ.

**ಶಿಬಿರ ಶುಲ್ಕ : ₹ 300 (ವಸತಿ ಸೌಕರ್ಯ ರಹಿತ); ₹ 600 (ವಸತಿ ಸೌಕರ್ಯ ಸಹಿತ)**

## ವಸಂತ ವಿಹಾರ ( 2011ರ ಏಪ್ರಿಲ್ 17ರಿಂದ 24 ರವರೆಗೆ)

ಆತ್ಮೀಯ ಭಕ್ತರೇ, ಸ್ವಾಮಿ ವಿವೇಕಾನಂದರ 150ನೇ ಜನ್ಮಜಯಂತಿ ಮಹೋತ್ಸವದ ಅಂಗವಾಗಿ 10ರಿಂದ 16 ವರ್ಷದ ಒಳಗಿನ ಮಕ್ಕಳಿಗಾಗಿ ಆವಾಸಿ ಬೇಸಿಗೆ ಶಿಬಿರವನ್ನು (ವಸಂತ ವಿಹಾರ) ಏರ್ಪಡಿಸಿದ್ದೇವೆ. ಬೆಳಗ್ಗೆಯಿಂದ ಸಾಯಂಕಾಲದವರೆಗೂ ನಡೆಯುವ ಈ ಶಿಬಿರದಲ್ಲಿ ಯೋಗಾಸನ–ಪ್ರಾಣಾಯಾಮ, ವ್ಯಕ್ತಿತ್ವ ವಿಕಸನ ಮತ್ತು ಮೌಲ್ಯಶಿಕ್ಷಣ ತರಗತಿಗಳು, ಪ್ರಾರ್ಥನೆ ಮುಂತಾದವು ಇರುತ್ತವೆ. ಹೊರಗಿನಿಂದ ಬರುವ ಮಕ್ಕಳಿಗೆ ವಸತಿ ಸೌಕರ್ಯವನ್ನೂ ಕಲ್ಪಿಸಲಾಗಿದೆ. ನಮ್ಮ ಪ್ರಾಚೀನ ಸಂಸ್ಕೃತಿಯ ಮೌಲ್ಯಗಳು ಮತ್ತು ಸ್ವಾಮಿ ವಿವೇಕಾನಂದರ ಬೋಧನೆಗಳ ಬಗ್ಗೆ ನಿಮ್ಮ ಮಕ್ಕಳು ಅರಿತುಕೊಳ್ಳಲು ಇದೊಂದು ಅಪೂರ್ವ ಅವಕಾಶ.

**ಶಿಬಿರ ಶುಲ್ಕ : ₹ 200 (ವಸತಿ ಸೌಕರ್ಯ ರಹಿತ); ₹ 500 (ವಸತಿ ಸೌಕರ್ಯ ಸಹಿತ).**

ದಯವಿಟ್ಟು ಮೇಲಿನ ಶಿಬಿರಗಳ ಶುಲ್ಕವನ್ನು ಡಿ.ಡಿ. ಮೂಲಕ 'ಶ್ರೀ ರಾಮಕೃಷ್ಣ ಶಾರದಾಶ್ರಮ, ಪೊನ್ನಂಪೇಟೆ' ಪರವಾಗಿ ಕಳುಹಿಸಿ ಕೊಡಿ. ಯಾವ ಶಿಬಿರಕ್ಕಾಗಿ ಹಣ ಕಳಿಸುತ್ತೀರೆಂದು ದಯವಿಟ್ಟು ನಮೂದಿಸಿ. ನಿಮ್ಮ ಪತ್ರದಲ್ಲಿ ಪೂರ್ತಿ ಹೆಸರು, ವಯಸ್ಸು, ಉದ್ಯೋಗ (ಮಕ್ಕಳಾದರೆ, ಶಾಲೆ), ಪೂರ್ಣ ಅಂಚೆ ವಿಳಾಸ, ಪಿನ್ ಕೋಡ್, ಮೊಬೈಲ್ ಸಂಖ್ಯೆ, ಇ–ಮೈಲ್ ವಿಳಾಸ (ಇದ್ದರೆ) ಇವುಗಳನ್ನು ತಪ್ಪದೆ ಬರೆದು ಕಳಿಸಬೇಕಾಗಿ ವಿನಂತಿ. ನಾವು ನಿಮಗೆ ದೃಢೀಕರಣ ಪತ್ರ ಮತ್ತು ಇತರ ಮಾಹಿತಿಗಳನ್ನು ಕಳುಹಿಸಿಕೊಡುತ್ತೇವೆ.

ಅಧ್ಯಕ್ಷರು

## ಮಂಗಳೂರಿನ ಶ್ರೀರಾಮಕೃಷ್ಣ ಬಾಲಕಾಶ್ರಮಕ್ಕೆ ಅರ್ಜಿ ಆಹ್ವಾನ

ಆರ್ಥಿಕವಾಗಿ ಹಿಂದುಳಿದ ಗ್ರಾಮೀಣ ಪ್ರತಿಭಾವಂತ ವಿದ್ಯಾರ್ಥಿಗಳ ಶಿಕ್ಷಣಕ್ಕೆ ನೆರವು ನೀಡುವ ನಿಟ್ಟಿನಲ್ಲಿ ಮಂಗಳೂರಿನ ಶ್ರೀರಾಮಕೃಷ್ಣ ಬಾಲಕಾಶ್ರಮವು ಅರ್ಹ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಮಂಗಳೂರು ರಾಮಕೃಷ್ಣ ಮಿಷನ್ನಿನ ವತಿಯಿಂದ ಸುಮಾರು 60 ವರ್ಷಗಳಿಂದ ನಡೆಯುತ್ತಿರುವ ಬಾಲಕಾಶ್ರಮದಲ್ಲಿ ಸಾವಿರಾರು ವಿದ್ಯಾರ್ಥಿಗಳು ಶಿಕ್ಷಣವನ್ನು ಯಶಸ್ವಿಯಾಗಿ ಪೂರೈಸಿ ಇಂದು ಸಮಾಜದಲ್ಲಿ ಸತ್ಪ್ರಜೆಗಳಾಗಿ ಬಾಳುತ್ತಿದ್ದಾರೆ.

ದಕ್ಷಿಣ ಕನ್ನಡ ಮತ್ತು ನೆರೆಹೊರೆಯ ಜಿಲ್ಲೆಗಳ, 7ನೇ ತರಗತಿಯಲ್ಲಿ ಉತ್ತಮ ಶ್ರೇಣಿಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ 8ನೇ ತರಗತಿಯ ಕನ್ನಡ ಮತ್ತು ಆಂಗ್ಲ ಮಾಧ್ಯಮದಲ್ಲಿ ವಿದ್ಯಾರ್ಜನೆಗೆ ಅವಕಾಶವಿದ್ದು, ಉಚಿತ ಶಿಕ್ಷಣ, ಊಟ, ವಸತಿ ಒದಗಿಸಲಾಗುವುದು. ವಿದ್ಯಾರ್ಥಿಗಳ ಮೇಲ್ವಿಚಾರಣೆಯನ್ನು ಆಶ್ರಮದ ಸ್ವಾಮೀಜಿಯವರೇ ನೋಡಿಕೊಳ್ಳುತ್ತಾರೆ. ಮಾತ್ರವಲ್ಲದೆ ಭಜನೆ, ಸಂಗೀತ, ಯೋಗ, ಸತ್ಕಾರ, ಶ್ರಮಸೇವೆ, ತೋಟಗಾರಿಕೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತರಬೇತಿ ನೀಡಲಾಗುತ್ತದೆ. ಇದಲ್ಲದೆ ಆಶ್ರಮದ ಸುವ್ಯವಸ್ಥಿತ ಪುಸ್ತಕ ಭಂಡಾರದಲ್ಲಿರುವ ಜ್ಞಾನಾಭಿವೃದ್ಧಿಯ ಮತ್ತು ವ್ಯಕ್ತಿತ್ವವಿಕಸನಕ್ಕೆ ಸಂಬಂಧಪಟ್ಟ ಪುಸ್ತಕಗಳ ಲಾಭ ಪಡೆಯಬಹುದು. ಬಾಲಕಾಶ್ರಮವು ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕಾಗಿ ಮತ್ತು ಇತರ ದೈನಂದಿನ ಚಟುವಟಿಕೆಗಳಿಗಾಗಿ ವಿಶಾಲವಾದ ಕಟ್ಟಡವನ್ನು ಹೊಂದಿರುತ್ತದೆ. ಜೊತೆಗೆ ನಮ್ಮಲ್ಲಿ ಕಂಪ್ಯೂಟರ್ ಕಲಿಕೆಗಾಗಿ ವಿಶೇಷ ವ್ಯವಸ್ಥೆಯಿರುತ್ತದೆ. ಆಶ್ರಮವು ಉತ್ತಮವಾದ ಪರಿಸರವನ್ನು ಹೊಂದಿದ್ದು ವಿದ್ಯಾರ್ಥಿಗಳು ಸತ್ಸಂಸ್ಕಾರಗಳನ್ನು ಮೈಗೂಡಿಸಿಕೊಳ್ಳುವಲ್ಲಿ ಪೂರಕವಾಗಿರುತ್ತದೆ.

ಬಾಲಕಾಶ್ರಮಕ್ಕೆ ಸೇರಬಯಸುವ ವಿದ್ಯಾರ್ಥಿಗಳು ತಮ್ಮ 7ನೇ ತರಗತಿಯ ಪರೀಕ್ಷೆ ಮುಗಿದ ಬಳಿಕ ಬಾಲಕಾಶ್ರಮದ ಪರಿಚಯ–ಮಾಹಿತಿಗಾಗಿ ಒಂದು ವಾರ ಬಾಲಕಾಶ್ರಮದಲ್ಲಿ ಉಳಿದುಕೊಳ್ಳಬೇಕು. ಇದಕ್ಕೆ ಮುನ್ನ ಬಾಲಕಾಶ್ರಮವನ್ನು ದೂರವಾಣಿಯಲ್ಲಿ ಸಂಪರ್ಕಿಸಿ ತಮ್ಮೊಡನೆ ತರಬೇಕಾದ ವಸ್ತುಗಳ ಬಗ್ಗೆ ಮಾಹಿತಿಯನ್ನು ಪಡೆದುಕೊಳ್ಳಬೇಕು. ಸೇರಬಯಸುವ ವಿದ್ಯಾರ್ಥಿಗಳಿಗೆ ಮೇ 8 ನೇ ತಾರೀಕು ಆದಿತ್ಯವಾರದಂದು (7ನೇ ತರಗತಿಯ ಪಠ್ಯದ ಆಧಾರಿತ) ಲಿಖಿತ ಪ್ರವೇಶಪರೀಕ್ಷೆ ನಡೆಯಲಿದೆ.

ಹೆಚ್ಚಿನ ವಿವರಗಳಿಗಾಗಿ ತಕ್ಷಣವೇ ಸಂಪರ್ಕಿಸಿ: **ಶ್ರೀರಾಮಕೃಷ್ಣ ಮಿಷನ್ ಬಾಲಕಾಶ್ರಮ, ಮಂಗಳಾದೇವಿ ರಸ್ತೆ, ಮಂಗಳೂರು–575 001 (ದೂರವಾಣಿ: 0824–2414216)**